ವಿಷಯ:- ಶಿಗ್ಗಾಂವದಲ್ಲಿ ಎ.ಪಿ.ಎಂ.ಸಿ. ಮುಖ್ಯ ಕಛೇರಿ ಮೊದಲಿನಂತೆ ಮುಂದುವರಿಸುವ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 555 (952)

ಶ್ರೀ ಮಂಜುನಾಥ್ ಸಿ.ಕುನ್ನೂರ (ಶಿಗ್ಗಾಂವಿ):- ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್‌ದಲ್ಲಿ ಎ.ಪಿ.ಎಂ.ಸಿ. ಮುಖ್ಯ ಕಛೇರಿ ಎಂದು ಪ್ರಾರಂಭವಾಯಿತು ಅದರ ಕ್ಷೇತ್ರದ ವ್ಯಾಪ್ತಿಯೇನು?

ಆ) ಐಲಿ ಕಡೆಗೆ ಶಿಗ್ಗಾಂವದಿಂದ ಕಲಘಟಗಿಗೆ ಎ.ಪಿ.ಎಂ.ಸಿ. ಮುಖ್ಯ ಕಛೇರಿ ಸ್ಥಳಾಂತರಿಸಲಾಗಿದೆಯೇ, ಅದಕ್ಕೆ ಕಾರಣಗಳೇನು?

ಇ) ಶಿಗ್ಗಾಂವಿಯಲ್ಲಿ ಎ.ಪಿ.ಎಂ.ಸಿ. ಮುಖ್ಯ ಕಛೇರಿ ಮೊದಲಿನಂತೆ ಮುಂದುವರೆಸಲಾಗುವುದೇ?

ಶ್ರೀ ಸಿ.ಬೈರೆಗೌಡ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) 20.06.92 ಶಿಗ್ಗಾಂವ ಮತ್ತು ಕಲಘಟಗಿ ತಾಲ್ಲೂಕುಗಳು

ಆ) ಶಿಗ್ಗಾಂವಿ ಸಮಿತಿಯ ಕೇಂದ್ರ ಸ್ಥಾನವನ್ನು ಕಲಘಟಗಿಗೆ ಬದಲಾವಣೆ ಮಾಡಬೇಕೆಂದು ಬಂದ ಮನವಿಗಳನ್ನು ಪರಿಗಣಿಸಿ ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯು 97 ಎಂಆರ್‌ಇ 95 ದಿನಾಂಕ 13-03-96ರಲ್ಲಿ ಶಿಗ್ಗಾಂವಿ ಮಾರುಕಟ್ಟೆ ಸಮಿತಿಯ ಹೆಸರನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕಲಘಟಗಿ ಎಂದು ಮತ್ತು ಅದರ ಕೇಂದ್ರ ಸ್ಥಾನವನ್ನು ಕಲಘಟಗಿ ಎಂದು ನಿರ್ದಿಷ್ಟ ಪಡಿಸಿದೆ. ಶಿಗ್ಗಾಂವಿಯಲ್ಲಿನ ಮುಖ್ಯ ಕಛೇರಿಯನ್ನು ಕಲಘಟಗಿಗೆ ಸ್ಥಳಾಂತರ ಮಾಡಲಾಗುತ್ತಿದೆ.

ಇ) ಇಲ್ಲ.

ವಿಷಯ:- ಅಂಬೇಡ್ಕರ್ ಯೋಜನೆಯಡಿಯಲ್ಲಿನ ಮನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 556 (953)

ಶ್ರೀ ಕುಂಬ್ಳೆ ಸುಂದರಾವ್ (ಸೂರತ್ಕಲ್):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿ ಅಂಬೇಡ್ಕರ್ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಮನೆಗಳಲ್ಲಿ ಎಷ್ಟು ಫಲಾನುಭವಿಗಳಿಗೆ ಒದಗಿಸಲಾಗಿದೆ. ಇನ್ನುಳಿದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

1) ಸುರತ್ಕಲ್ ಕ್ಷೇತ್ರದ ಕಾಟಿಪಾಳ್ಯದಲ್ಲಿ ಅಂಬೇಡ್ಕರ್ ವಸತಿ ಯೋಜನೆಯಲ್ಲಿ ನಿರ್ಮಿಸಲಾದ ಮನೆಗಳ ಪೈಕಿ 8 ಮನೆಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ. ಇನ್ನು 29 ಫಲಾನುಭವಿಗಳಿಗೆ ಮನೆಗಳನ್ನು ಒದಗಿಸಬೇಕಾಗಿರುತ್ತದೆ.

ವಿಷಯ:- ರಾಜ್ಯ ಸಾರಿಗೆ ಸಂಸ್ಥೆಯ ನಷ್ಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 557 (1255)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ನಷ್ಟ ಅನುಭವಿಸುತ್ತಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಪ್ರಮುಖ ಕಾರಣಗಳಾವುವು?

ಇ) ಇದನ್ನು ತಪ್ಪಿಸಲು ಸಂಸ್ಥೆ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):-

ಅ) ಹೌದು.

ಆ) ಸಂಸ್ಥೆಯ ನಷ್ಟಕ್ಕೆ ಸಂಬಂಧಿಸಿದ ಹಲವು ಪ್ರಮುಖ ಕಾರಣಗಳು ಈ ಕೆಳಕಂಡಂತೆ ಇರುತ್ತದೆ.

1) ವಿದ್ಯಾರ್ಥಿಗಳೂ ಸೇರಿದಂತೆ ವಿವಿಧ ಪ್ರಯಾಣಿಕ ವರ್ಗಕ್ಕೆ ಸಾರಿಗೆ ದರಗಳಲ್ಲಿ ರಿಯಾಯಿತಿಯನ್ನು ನೀಡಿರುವುದರಿಂದ ಸಾರಿಗೆ ಆದಾಯದಲ್ಲಿ ಸಂಭವಿಸುತ್ತಿರುವ ಕಡಿತ.

2) ಇಂಧನ, ಟೈರುಗಳು, ಟ್ಯೂಬುಗಳು, ಬಿಡಿ ಭಾಗಗಳು ಮತ್ತು ಇತರೆ ಬಳಕೆ ಸಾಮಗ್ರಿಗಳ ಬೆಲೆಗಳಲ್ಲಿ ಕಾಲಕಾಲಕ್ಕೆ ಆಗಿರುವ ಹೆಚ್ಚಳ.

3) ಅಧಿಕ ಬಡ್ಡಿಯ ಹೊರೆ

4) ಕಾಲಕಾಲಕ್ಕೆ ಸಂಭವಿಸುತ್ತಿರುವ ವೇತನ ಪರಿಷ್ಕರಣೆ

5) ಇಂಧನ, ಟೈರುಗಳು, ಬಿಡಿ ಭಾಗಗಳು ಮುಂತಾದವುಗಳ ಬೆಲೆಗಳಲ್ಲಿ ಹೆಚ್ಚಳ ಉಂಟಾದಾಗಲೆಲ್ಲ ಪ್ರಯಾಣದ ದರಗಳನ್ನು ಪರಿಷ್ಕರಿಸಲು ಸಾಧ್ಯವಾಗದೆಯಿರುವಿಕೆ.

ಇ) ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಸಂಸ್ಥೆಯು ತೆಗೆದುಕೊಂಡಿದೆ ಮತ್ತು ತೆಗೆದುಕೊಳ್ಳಲಾಗುತ್ತಿದೆ.

1)ಮಾರ್ಗಗಳ ಕಾರ್ಯಾಚರಣೆಯನ್ನು ಪುನಃ ರಚಿಸುವ ಮೂಲಕ ಆದಾಯವನ್ನು ಹೆಚ್ಚಿಸಿಕೊಳ್ಳುವುದು.